ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

ವಸತಿ ಯೋಜನೆಗಳ ಕುರಿತು

ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) :-

356 (429) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ವಸತಿ ನಿರಾಶ್ರಿತರಿಗಾಗಿ ವಸತಿ ಕಲ್ಪಿಸಲು ಎಷ್ಟು ಯೋಜನೆ ಚಾಲ್ತಿಯಲ್ಲಿವೆ ; (ಮಾಹಿತಿ ನೀಡುವುದು)

(ಆ) ಕಳೆದ 3 ವರ್ಷಗಳಿಂದ ವಸತಿ ನಿರಾಶ್ರಿತರನ್ನು ಗುರುತಿಸಲು ಯಾವುದಾದರು ಸಮೀಕ್ಷೆ ನಡೆಸಲಾಗಿದೆಯೇ ; (ಮಾಹಿತಿ ನೀಡುವುದು)

(ಇ) ವಸತಿ ಯೋಜನೆಗಳಲ್ಲಿ ಹಲವು ಗ್ರಾಮಗಳಿಗೆ ನೀಡಿದ ಮೀಸಲಾತಿಯ ಗುರಿ ತಲುಪದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; (ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮವಾರು, ಮೀಸಲಾತಿವಾರು ಮಾಹಿತಿ ನೀಡುವುದು)

(ಈ) ಗುರುತಿಸದ ಗ್ರಾಮಗಳಿಗೆ ಮರಳಿ ಅದೇ ಗುರಿಗಳನ್ನು ನೀಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು ;

(ಉ) ಕೆಲವೊಂದು ಜಿಲ್ಲೆಗಳಲ್ಲಿ ಒಂದೇ ಕುಟುಂಬವು ಹಲವು ವಸತಿ ಯೋಜನೆಗಳ ಫಲಾನುಭಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಊ) ಒಂದೇ ಕುಟುಂಬಕ್ಕೆ ಹಲವು ಯೋಜನೆಗಳಿಂದ ಮನೆ ಹಂಚಿಕೆಯಾಗುವುದನ್ನು ತಡೆಯಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ? (ವಿವರ ನೀಡುವುದು)